ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ ಬಿ.ಎಂ.ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	906 (1028)
ಉತ್ತರಿಸಬೇಕಾದ ದಿನಾಂಕ	21.09.2021
ಉತ್ತರಿಸುವವರು	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮಂಗಳೂರು ತಾಲ್ಲೂಕು ಉಲ್ಲಾಳ ನಗರಸಭೆಯ ವ್ಯಾಪ್ತಿಯಲ್ಲಿ ಮಲಿನ ನೀರು ಶುದ್ಧೀಕರಣ ಘಟಕ (STP) ಅಳವಡಿಸಲು ಹಾಗೂ ವೆಟ್‌ವೆಲ್ ನಿರ್ಮಿಸುವ ಕೆಲಸ ಯಾವಾಗ ಪ್ರಾರಂಭಿಸಲಾಗಿದೆ:	ಉಳ್ಳಾಲ ಒಳಚರಂಡಿ ಯೋಜನೆಯಡಿ 8 ಸಂಖ್ಯೆ ವೆಟ್‌ವೆಲ್‌ಗಳು, ಸೀವರ್ ಕೊಳವೆ ಮಾರ್ಗ, ಸೀವೇಜ್ ಪಂಪ್‌ಸೆಟ್‌ಗಳ ಅಳವಡಿಕೆ ಮತ್ತು 2 ಸಂಖ್ಯೆ ಮಲಿನನೀರು ಶುದ್ಧೀಕರಣ ಘಟಕ ನಿರ್ಮಾಣಕ್ಕೆ ಕರಾರು ಸಂಖ್ಯೆ 02/2019-20 ದಿನಾಂಕ 27-02-2019 ರಲ್ಲಿ ಗುತ್ತಿಗೆಯನ್ನು ವಹಿಸಲಾಗಿರುತ್ತದೆ. ಮಲಿನ ನೀರು ಶುದ್ಧೀಕರಣ ಘಟಕ ಕಾಮಗಾರಿಯನ್ನು ಆಗಸ್ಟ್ 2020 ರಲ್ಲಿ ಪ್ರಾರಂಭಿಸಲಾಗಿದೆ.
ಆ)	ಸದರಿ ಪ್ರದೇಶದ ಸುತ್ತಮುತ್ತಲೂ ಆಸ್ಪತ್ರೆ, ಶಾಲೆ, ಮಸೀದಿ ಹಾಗೂ ದೇವಸ್ಥಾನಗಳಿದ್ದು ಈ ಪ್ರದೇಶದಲ್ಲಿ ವಾಸವಿರುವ ಜನರುಗಳಿಗೆ ತೊಂದರೆಯಾಗುವುದಿಲ್ಲವೇ;	ಉಳ್ಳಾಲ ಪಟ್ಟಣಕ್ಕೆ ಹಾಲಿ ಯಾವುದೇ ಒಳ ಚರಂಡಿ ವ್ಯವಸ್ಥೆ ಇರುವುದಿಲ್ಲ. ಈ ಪಟ್ಟಣದ ತ್ಯಾಜ್ಯ ನೀರು, ಮಳೆ ನೀರು ತೆರೆದ ಚರಂಡಿಗಳಲ್ಲಿ ಹರಿಯುತ್ತಿದ್ದು, ಪಟ್ಟಣದ ಪರಿಸರವು ಹಾಳಾಗುತ್ತಿದೆ. ಸದರಿ ಯೋಜನೆಯು ಅನುಷ್ಠಾನಗೊಂಡಲ್ಲಿ ಮಲಿನ ನೀರು ಶುದ್ಧೀಕರಣ ಘಟಕದ ಸುತ್ತ ವಾಸವಿರುವ ಜನರುಗಳಿಗೆ ತೊಂದರೆಯಾಗುವುದಿಲ್ಲ ಹಾಗೂ ಕಲುಷಿತ ನೀರಿನಿಂದ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮಗಳು ತಪ್ಪುತ್ತದೆ. ಯಾವುದೇ ರೀತಿಯ ಜಲಚರಜೀವಿಗಳ ಜೀವನಕ್ಕೆ ಆತಂಕವಿರುವುದಿಲ್ಲ. ಮಲಿನ ನೀರು ಶುದ್ಧೀಕರಣ ಘಟಕದಿಂದ ಹೊರಬಿಡಲಾಗುವ ಶುದ್ಧೀಕರಿಸಿದ ನೀರಿನ BOD ಪ್ರಮಾಣವು 10mg/ltr. ಗಿಂತ ಕಡಿಮೆ ಇರುವಂತೆ ವಿನ್ಯಾಸಗೊಳಿಸುವುದರಿಂದ ಜೀವಜಲಕ್ಕೆ ಹಾಗೂ ಜೀವಿಗಳಿಗೆ ಯಾವುದೇ ರೀತಿಯ ಹಾನಿ ಆಗುವುದಿಲ್ಲ.
ಇ)	ಈ ಕಾರ್ಯನಿರ್ವಹಿಸಲು ಉಲ್ಲಾಳ ನಗರಸಭೆ, ಪರಿಸರ ನಿಯಂತ್ರಣ ಮಂಡಳಿ, CRZ ಹಾಗೂ ಸ್ಥಳೀಯ ಸಂಸ್ಥೆಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ (NOC) ಪಡೆಯಲಾಗಿದೆಯೇ: (ಪಡೆದಿದ್ದಲ್ಲಿ, ಅವುಗಳ ಪ್ರತಿ ಒದಗಿಸುವುದು)	ಉಳ್ಳಾಲ ಪಟ್ಟಣವು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿದ್ದು, ಅರಬ್ಬೀ ಸಮುದ್ರದ ತೀರದಲ್ಲಿರುತ್ತದೆ. ಉಳ್ಳಾಲ ಪಟ್ಟಣಕ್ಕೆ ಹಾಲಿ ಯಾವುದೇ ಒಳ ಚರಂಡಿ ವ್ಯವಸ್ಥೆ ಇರದ ಕಾರಣ ಪಟ್ಟಣದ ತ್ಯಾಜ್ಯ ನೀರು, ಮಳೆ ನೀರಿನ ತೆರೆದ ಚರಂಡಿಗಳಲ್ಲಿ ಹರಿಯುತ್ತಿದ್ದು, ಪಟ್ಟಣದ ಪರಿಸರವು ಹಾಳಾಗುತ್ತಿದೆ. ಉಳ್ಳಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸದಿರುವ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರು ವರಿಟ್ ಅರ್ಜಿ ಸಂಖ್ಯೆ:4861/2007 (OM-CPC) ಇತ್ಯರ್ಥ ಸಲುವಾಗಿ, ಈ ಯೋಜನೆಯನ್ನು ಪ್ರಸ್ತುತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದೆಂದು ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಮಾಣ ಪತ್ರ ಸಲ್ಲಿಸಿರುತ್ತದೆ.

		ಸದರಿ ಕಾಮಗಾರಿಗೆ ದಿನಾಂಕ: 30-05-2009 ರಂದು ಉಳ್ಳಾಲ ಪುರಸಭೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆಯ ನಡವಳಿಯ ಪ್ರಕಾರ ಯೋಜನೆಗೆ ಒಪ್ಪಿಗೆಯನ್ನು ನೀಡಲಾಗಿರುತ್ತದೆ. ದಿನಾಂಕ: 03-10-2020ರಂದು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ಕಛೇರಿ ಸಭಾಂಗಣದಲ್ಲಿ ಜಿಲ್ಲಾ ಕರಾವಳಿ ವಲಯ ನಿರ್ವಹಣಾ ಸಮಿತಿ ಸಭೆಯಲ್ಲಿ ಮಲಿನ ನೀರು ಶುದ್ಧೀಕರಣ ಘಟಕಗಳ ಬಗ್ಗೆ ಚರ್ಚಿಸಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಲಾಗಿದ್ದು, ನಂತರ ಮುಂದಿನ ಅನುಮತಿಗಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 04-03-2021 ರಂದು ನಡೆದ ಸಭೆಯಲ್ಲಿ ಮಂಡಿಸಲಾಯಿತು. ಸದರಿ ಸಭೆಯಲ್ಲಿ, ಯೋಜನೆಯಲ್ಲಿ ಉದ್ದೇಶಿಸಿರುವ ಎಲ್ಲಾ ಘಟಕಗಳ ಕಾರ್ಯದ ಬಗ್ಗೆಯೂ ಚರ್ಚಿಸಿ, ಉಳ್ಳಾಲ ನಗರದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಮಲಿನ ನೀರಿನಿಂದ ಪರಿಸರ ಹಾಗೂ ಸಮುದ್ರದ ರಕ್ಷಣೆ ಮಾಡುವ ದೃಷ್ಟಿಯಿಂದ ಅನುಮತಿ ಕೋರಲಾಗಿದೆ.
ಈ)	ಈ ಕೆಲಸವನ್ನು ತರಾತುರಿಯಲ್ಲಿ ಪ್ರಾರಂಭಿಸಿದ್ದು, ಸ್ಥಳೀಯ ಜನರಿಗೆ ಆಗುವ ತೊಂದರೆಗಳು ಹಾಗೂ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮದ ಬಗ್ಗೆ ಸಮಗ್ರ ಅಧ್ಯಯನ ನಡೆಸಲಾಗಿದೆಯೇ: (ಹಾಗಿದ್ದಲ್ಲಿ ಅಧ್ಯಯನದ ವರದಿ ಒದಗಿಸುವುದು)	ಉಳ್ಳಾಲ ನಗರದಲ್ಲಿ ಯಾವುದೇ ಒಳಚರಂಡಿ ವ್ಯವಸ್ಥೆ ಇರದ ಕಾರಣ ಪಟ್ಟಣದ ತ್ಯಾಜ್ಯ ನೀರು, ಮಳೆ, ನೀರು ತೆರೆದ ಚರಂಡಿಗಳಲ್ಲಿ ಹರಿಯುತ್ತಿದ್ದು, ಪಟ್ಟಣದ ಪರಿಸರವು ಹಾಳಾಗುವುದರ ಜೊತೆಗೆ ನೇತ್ರಾವತಿ ನದಿಯು ಕಲುಷಿತಗೊಳ್ಳುತ್ತಿರುವ ಕಾರಣ ಎನ್.ಜಿ.ಟಿ. (ರಾಷ್ಟ್ರೀಯ ಹಸಿರು ನ್ಯಾಯ ಪೀಠ) ಆದೇಶದಂತೆ ನೇತ್ರಾವತಿ ನದಿಯನ್ನು ಕಲುಷಿತಗೊಳ್ಳದಂತೆ ತಡೆಯಲು ಉಳ್ಳಾಲ ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಬಹಳ ಅವಶ್ಯಕವಾಗಿರುತ್ತದೆ. ಈಗಾಗಲೇ ಉಳ್ಳಾಲ ವ್ಯಾಪ್ತಿಯಲ್ಲಿ ಕಲುಷಿತ ನೀರು ನೇರವಾಗಿ ನೇತ್ರಾವತಿ ನದಿಯನ್ನು ಸೇರುತ್ತಿದ್ದು, ನದಿಯ ನೀರು ಕಲುಷಿತಗೊಂಡು ಪರಿಸರದ ಮೇಲೆ ದುಷ್ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ. ಉಳ್ಳಾಲ ಒಳಚರಂಡಿಯೋಜನೆ ಅನುಷ್ಠಾನಗೊಂಡಲ್ಲಿ ನೇತ್ರಾವತಿ ನದಿ ಮತ್ತು ಸಮುದ್ರವು ಕಲುಷಿತ ನೀರಿನಿಂದ ಮುಕ್ತಗೊಳ್ಳುವುದರಿಂದ ಯೋಜನೆಯ ಅನುಷ್ಠಾನ ಬಹಳ ಪ್ರಾಮುಖ್ಯವಾಗಿದೆ.
ಉ)	ಶುದ್ಧೀಕರಣ ಘಟಕದಿಂದ ಬರುವ ಮಲಿನ ನೀರನ್ನು ಪೂರ್ಣ ಪ್ರಮಾಣದಲ್ಲಿ ಶುದ್ಧೀಕರಣ ಮಾಡದೆ ಸಮುದ್ರಕ್ಕೆ ಬಿಡಲು ನಿರ್ಧರಿಸುವುದು	6.60 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕದಲ್ಲಿ ಐ.ಐ.ಟಿ ಮುಂಬೈ ಪೇಟೆಂಟ್ಪಡೆದಿರುವ (Soil Bio Technology-SBT) ತಂತ್ರಜ್ಞಾನವನ್ನು ಅಳವಡಿಸಲಾಗಿದ್ದು, ಸದರಿ ತಂತ್ರಜ್ಞಾನದಲ್ಲಿ BODಯು10 mg/ltr. ಗಿಂತ ಕಡಿಮೆ ಪಡೆಯಬಹುದಾಗಿದ್ದು, ಶುದ್ಧೀಕರಿಸಿದ ನೀರನ್ನು ಸದರಿ ಘಟಕದಲ್ಲಿ ಗಿಡ ಹಾಗೂ ಮರಗಳನ್ನು ಬೆಳೆಯಲು ಕೂಡಾ ಬಳಸಲಾಗುವುದು

		ಸರ್ಕಾರದ ಗಮನಕ್ಕೆ ಬಂದಿದೆಯೇ: ಇಂತಹ ಕಲುಷಿತ ನೀರಿನಿಂದ ಪರಿಸರದ ಮೇಲೆ ಆಗುವ ದುಷ್ಪರಿಣಾಮ ಹಾಗೂ ಮೀನುಗಳ ಮಾರಣ ಹೋಮ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?	ಮತ್ತು ಈ ಘಟಕದಲ್ಲಿ ಕಾಂಪೋಸ್ಟಿಂಗ್ ಬೆಡ್ ಇದ್ದು ಗೊಬ್ಬರವನ್ನು ಸಹ ಪಡೆಯಬಹುದಾಗಿದ್ದು, ಇಲೆಕ್ಟ್ರೋಮೆಕ್ಯಾನಿಕಲ್ ಐಟಂಗಳು ತೀರಾ ಕಡಿಮೆ ಇದ್ದು ಅನುಷ್ಠಾನಗೊಂಡ ನಂತರ ನಿರ್ವಹಣೆಯು ತುಂಬಾ ಸುಲಭದಾಯಕವಾಗಿರುತ್ತದೆ. ಸದರಿ ಯೋಜನೆಯಿಂದ ಯಾವುದೇ ಶುದ್ಧೀಕರಿಸದ ನೀರನ್ನು ಸಮುದ್ರಕ್ಕೆ ಬಿಡಲಾಗುವುದಿಲ್ಲ ಹಾಗೂ ಸದರಿ ಯೋಜನೆಯಿಂದ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಹಾಗೂ ಮೀನುಗಳ ಮಾರಣ ಹೋಮಕ್ಕೆ ಅವಕಾಶ ಇರುವುದಿಲ್ಲ, ಬದಲಾಗಿ ಸದರಿ ಯೋಜನೆಯ ಅನುಷ್ಠಾನದಿಂದ ಪರಿಸರ ಹಾಗೂ ಜೀವಜಲ ಸ್ವಚ್ಛಗೊಳ್ಳುತ್ತದೆ ಹಾಗೂ ಆರೋಗ್ಯ ಸುಧಾರಿಸುತ್ತದೆ.

ಸಂಖ್ಯೆ: ನಅಇ 162 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು